# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :2054
ಸದಸ್ಯರ ಹೆಸರು : ಡಾ|| ಎಂ.ಜಿ. ಮುಳೆ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 25.03.2026

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>Kalayana Karnataka Road Transport Corporation (KKRTC) ಯ ಬೀದರ ವಿಭಾಗದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು ಬಸ್‌ಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ಗ್ರಾಮೀಣ ಮಾರ್ಗಗಳಿಗೆ ಸಂಚರಿಸುವ ಬಸ್‌ಗಳು ಎಷ್ಟು ಮತ್ತು ನಗರ/ಅಂತರ ಜಿಲ್ಲಾ ಮಾರ್ಗಗಳಿಗೆ ಸಂಚರಿಸುವ ಬಸ್‌ಗಳ ಸಂಖ್ಯೆ ಎಷ್ಟು; (ವರ್ಗವಾರು ವಿವರ ನೀಡುವುದು)</td><td>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬೀದರ ವಿಭಾಗದಲ್ಲಿ ಪ್ರಸ್ತುತ ವಿವಿಧ ಮಾದರಿಯ 626 ಬಸ್ಸುಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಬಸ್ಸುಗಳಲ್ಲಿ ವರ್ಗವಾರು ಕಾರ್ಯಾಚರಣೆಯಲ್ಲಿರುವ ಮಾರ್ಗಗಳ ವಿವರ ಈ ಕೆಳಗಿನಂತಿದೆ :<br><br>
<table>
<tr><th>ಸಾರಿಗೆ ವರ್ಗ</th><th>ಅನುಸೂಚಿ ಸಂಖ್ಯೆ</th></tr>
<tr><td>ನಗರ</td><td>15</td></tr>
<tr><td>ಸಾಮಾನ್ಯ (ಗ್ರಾಮೀಣ)</td><td>293</td></tr>
<tr><td>ವೇಗದೂತ (ಅಂತರ ಜಿಲ್ಲೆ)</td><td>287</td></tr>
<tr><td>ಎಸಿ ಸ್ಲೀಪರ್ (ಅಂತರ ಜಿಲ್ಲೆ)</td><td>2</td></tr>
<tr><td>ನಾನ್ ಎಸಿ ಸ್ಲೀಪರ್ (ಅಂತರ ಜಿಲ್ಲೆ)</td><td>8</td></tr>
<tr><td>ಒಟ್ಟು</td><td>605</td></tr>
</table></td></tr>
<tr><td>ಆ.</td><td>ಬೀದರ್ ವಿಭಾಗದ ಬಸ್‌ಗಳಿಗೆ ಪ್ರತಿ ಲೀಟರ್ ಡೀಸೆಲ್‌ಗೆ ದೊರೆಯುತ್ತಿರುವ ಸರಾಸರಿ ಕಿಲೋಮೀಟರ್ (KMPL) ಪ್ರಮಾಣ ಎಷ್ಟು; ಇಂಧನ ದಕ್ಷತೆ ಹೆಚ್ಚಿಸಲು, ಇಂಧನ ಸೋರಿಕೆ ತಡೆಯಲು ಮತ್ತು ಡ್ರೈವರ್‌ಗಳ ಆರ್ಥಿಕ ಚಾಲನೆ (Fuel-efficient driving) ತರಬೇತಿಗಾಗಿ</td><td>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬೀದರ್ ವಿಭಾಗದ ವಿವಿಧ ಮಾದರಿಯ ಬಸ್ಸುಗಳು ಪ್ರತಿ ಲೀಟರ್ ಡೀಸೆಲ್‌ಗೆ ದೊರೆಯುತ್ತಿರುವ ಸರಾಸರಿ ಕಿಲೋಮೀಟರ್ (KMPL) ವಿವರ ಈ ಕೆಳಕಂಡಂತಿದೆ:-<br>
<table>
<tr><th>ಮಾದರಿ</th><th>ಸರಾಸರಿ ಕಿಲೋಮೀಟರ್ (KMPL)</th></tr>
<tr><td>ವೇಗದೂತ</td><td>4.94</td></tr>
<tr><td>ರಾಜಹಂಸ</td><td>4.79</td></tr>
<tr><td>ಹವಾ ನಿಯಂತ್ರಣಾ ರಹಿತ ಸ್ಲೀಪರ್</td><td>4.87</td></tr>
<tr><td>ಹವಾ ನಿಯಂತ್ರಿತ ಸ್ಲೀಪರ್</td><td>4.45</td></tr>
<tr><td>ನಗರ ಸಾರಿಗೆ</td><td>5.07</td></tr>
</table></td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಕೈಗೊಂಡಿರುವ ತಾಂತ್ರಿಕ ಕ್ರಮಗಳೇನು: | ಇಂಧನ ಸೋರಿಕೆ ತಡೆಯಲು ಘಟಕದಲ್ಲಿ ಪ್ರತಿ ದಿನ ವಾಹನಗಳ ನಿರ್ವಹಣೆ ಸಮಯದಲ್ಲಿ ವಾಹನಗಳನ್ನು ಪರಿಶೀಲಿಸಿ ಕಾರ್ಯಾಚರಣೆಗೆ ಕಳುಹಿಸಲಾಗುತ್ತದೆ ಮತ್ತು ನಿರ್ವಹಣೆ ಸಮಯದಲ್ಲಿ ಇಂಧನ ಸೋರಿಕೆ ಕಂಡುಬಂದಲ್ಲಿ ಅಂತಹ ವಾಹನಗಳನ್ನು ದುರಸ್ಥಿಗೊಳಿಸಿ ಕಾರ್ಯಾಚರಣೆಗೊಳಿಸಲಾಗುತ್ತದೆ.<br>ಪ್ರತಿ ಘಟಕದಲ್ಲಿ ಚಾಲಕ ಬೋಧಕರನ್ನು ನೇಮಿಸಲಾಗಿದೆ. ಕಡಿಮೆ KMPL ತರುವ ಚಾಲಕರಿಗೆ ತರಬೇತಿ ನೀಡಲಾಗುತ್ತದೆ.<br>ಇಂಧನ ದಕ್ಷತೆ ಹೆಚ್ಚಿಸಲು ಪ್ರತಿ ವರ್ಷ ಫೆಬ್ರವರಿ ಹಾಗೂ ಮಾರ್ಚ್ ಮಾಹೆಯಲ್ಲಿ ದ್ವೈಮಾಸಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. |
| ಇ. | ಬೀದರ್ ವಿಭಾಗದಲ್ಲಿ ನಿಗದಿತ ಕಿಲೋಮಿಟರ್ ಮೀರಿಸಿ ಸಂಚರಿಸಿರುವ ಅಥವಾ ಹಳೆಯದಾಗಿರುವ (Over-aged) ಬಸ್‌ಗಳ ಸಂಖ್ಯೆ ಎಷ್ಟು: | ಬೀದರ್ ವಿಭಾಗದಲ್ಲಿ ನಿಗದಿತ ಕಿಲೋಮಿಟರ್ ಮೀರಿ 231 ಬಸ್ಸುಗಳು ಸಂಚರಿಸಿರುತ್ತವೆ. ನಿಗಮದಲ್ಲಿ ನಿಗದಿತ ಕಿ.ಮೀ ಕ್ರಮಿಸಿರುವ ಎಲ್ಲಾ ವಾಹನಗಳಿಗೆ ಪೂರ್ವಭಾವಿ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲಾಗಿದ್ದು, ಪ್ರಸ್ತುತ ಎಲ್ಲಾ ಬಸ್ಸುಗಳು ಸುಸ್ಥಿತಿಯಲ್ಲಿರುತ್ತವೆ.<br>ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: GSR 29 (E), ದಿನಾಂಕ:16.01.2023ರನ್ವಯ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದನುಸಾರ ಸಾರಿಗೆ ನಿಗಮಗಳ ಬಸ್‌ಗಳನ್ನು ನಿರುಪಯುಕ್ತಗೊಳಿಸಲು 15 ವರ್ಷ ವಯೋಮಾನವನ್ನು ನಿಗದಿಪಡಿಸಿರುತ್ತದೆ.<br>ಕ.ರಾ.ರ.ಸಾ.ನಿಗಮದ ಸುತ್ತೋಲೆ ಸಂಖ್ಯೆ:810/2023 ದಿನಾಂಕ:23.09.2023 ರನ್ವಯ ನಿಗಮದಲ್ಲಿನ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲು ಸೂಚಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ.<br>ಇದಲ್ಲದೆ, ಹೆಚ್ಚಿನ ಕಿ.ಮೀ. ಕ್ರಮಿಸಿರುವ ವಾಹನಗಳ, ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ. ಮಿತಿಗಿಂತ ಹೆಚ್ಚಿನ ಕಿ.ಮೀ. ಕ್ರಮಿಸಿ, ತಾಂತ್ರಿಕವಾಗಿ ಬಸ್‌ಗಳಿಗೆ ಅವಶ್ಯವಿದ್ದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಪ್ರಸ್ತುತ ಎಲ್ಲಾ ಬಸ್ಸುಗಳು ಸುಸ್ಥಿತಿಯಲ್ಲಿರುತ್ತವೆ. |
| ಈ. | ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹಳೆಯ ಬಸ್‌ಗಳನ್ನು ಸ್ಥಗಿತಗೊಳಿಸಲಾಗಿದೆ ಅವುಗಳ ಬದಲಿಗೆ ಎಷ್ಟು ಹೊಸ ಬಸ್‌ಗಳನ್ನು ಮಂಜೂರು ಮಾಡಿ ರಸ್ತೆಗಿಳಿಸಲಾಗಿದೆ: (ವರ್ಷವಾರು ಮಾಹಿತಿ ನೀಡುವುದು) | |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಆದಾಗ್ಯೂ, ಪ್ರತಿ ವರ್ಷ ನಿಗಮದ ಬಸ್‌ಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಸುಸ್ಥಿತಿಯಲ್ಲಿರುವುದನ್ನು ಖಾತ್ರಿಪಡಿಸಿಕೊಂಡು ಕಾರ್ಯಾಚರಣೆಗೊಳಿಸಲಾಗುತ್ತಿರುತ್ತದೆ.<br>ಬೀದರ್ ವಿಭಾಗದಲ್ಲಿ ಕಳೆದ 05 ವರ್ಷಗಳಲ್ಲಿ ಇದುವರೆಗೆ ಒಟ್ಟು 92 ಹಳೆಯ ಬಸ್ಸುಗಳನ್ನು ನಿಷ್ಕ್ರಿಯಗೊಳಲಿಸಲಾಗಿದೆ. ವರ್ಷವಾರು ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ: | ವರ್ಷ | ನಿಷ್ಕ್ರಿಯಗೊಳಿಸಲಾದ ಒಟ್ಟು ವಾಹನಗಳು |
|---|---|---|
| 01 | 2021-22 | 12 |
| 02 | 2022-23 | 04 |
| 03 | 2023-24 | 14 |
| 04 | 2024-25 | 26 |
| 05 | 2025-ಇದುವರೆಗೆ | 36 |
| | **ಒಟ್ಟು** | **92** |

ಬೀದರ್ ವಿಭಾಗಕ್ಕೆ ಕಳೆದ 05 ವರ್ಷಗಳಲ್ಲಿ 131 ವಿವಿಧ ಮಾದರಿಯ ಹೊಸ ಬಸ್‌ಗಳನ್ನು ಹಂಚಿಕೆ ಮಾಡಲಾಗಿದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಪ್ರಸ್ತುತ ವಿವಿಧ ಮಾದರಿಯ 4990 ಬಸ್ಸುಗಳು ಕಾರ್ಯಾಚರಣೆಯಲ್ಲಿರುತ್ತವೆ.

ನಿಗಮದಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ/ ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:

| **ಸಂಸ್ಥೆಗಳು** | **2023-24 (Jan)** | **2024-25** | **2025-26** | **ಒಟ್ಟು** |
|---|---|---|---|---|
| ಕ.ಕ.ರ.ಸಾ. ನಿಗಮ | 720 | 307 | 146 | 1173 |

ಮುಂದುವರೆದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಮಾರ್ಚ್-2026ರ ನಂತರ ಸಾರಿಗೆ ನಿಗಮಕ್ಕೆ 56 ವಿವಿಧ ರೀತಿಯ ಪ್ರೀಮಿಯಂ ಬಸ್‌ಗಳು ಸೇರ್ಪಡೆಗೊಳ್ಳಲಿದೆ.

2025-26ನೇ ಸಾಲಿನ ಆಯವ್ಯಯ ಕಂಡಿಕೆ 469 (iii)ರ ಘೋಷಣೆಯನ್ವಯ ನಿಗಮಕ್ಕೆ 400 ಡೀಸೆಲ್ ಬಸ್‌ಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಬಸ್‌ಗಳ ಖರೀದಿಗೆ ಅನುದಾನ ಮಂಜೂರಾತಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಕೋರಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ನಿರೀಕ್ಷಿಸಲಾಗಿದೆ.<br><br>ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ಕ.ಕ.ರ.ಸಾ.ನಿಗಮಕ್ಕೆ ಒಟ್ಟು 200 ವಿದ್ಯುತ್ ಚಾಲಿತ ಬಸ್ಸುಗಳನ್ನು GCC ಮಾದರಿಯಲ್ಲಿ ಆಚರಣೆ ಮಾಡಲು ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಸೇರ್ಪಡೆಗೊಳಿಸಲು ಯೋಜಿಸಲಾಗಿರುತ್ತದೆ.<br><br>2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 480ರಲ್ಲಿ ನಾಲ್ಕು ಸಾರಿಗೆ ನಿಗಮಗಳಿಗೆ 1000 ಡೀಸೆಲ್ ಬಸ್‌ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ |
| ಉ. | ಜಿಲ್ಲೆಯ ಸಾರಿಗೆ ವರ್ಕ್ ಶಾಪ್‌ಗಳಲ್ಲಿ ಬಸ್‌ಗಳ ಸಮರ್ಪಕ ನಿರ್ವಹಣೆಗೆ ಅಗತ್ಯವಿರುವ ಆಧುನಿಕ ಯಂತ್ರೋಪಕರಣಗಳು, ಲಿಫ್ಟ್‌ಗಳು, ಡಯಾಗ್ನೋಸ್ಟಿಕ್ ಉಪಕರಣಗಳು ಹಾಗೂ ಬಿಡಿಭಾಗಗಳ ಕೊರತೆ ಇರುವುದಾಗಿ ವರದಿಯಾಗಿದೆಯೇ; ಕಳೆದ ಒಂದು ವರ್ಷದಲ್ಲಿ ವರ್ಕ್ ಶಾಪ್ ಸುಧಾರಣೆ ಮತ್ತು ನಿರ್ವಹಣಾ ಸೌಲಭ್ಯಗಳಿಗಾಗಿ ಮೀಸಲಾದ ಮತ್ತು ಬಿಡುಗಡೆಯಾದ ಅನುದಾನ ಎಷ್ಟು; | ಜಿಲ್ಲೆಯ ಸಾರಿಗೆ ವರ್ಕ್‌ಶಾಪ್‌ಗಳಲ್ಲಿ ಬಸ್‌ಗಳ ಸಮರ್ಪಕ ನಿರ್ವಹಣೆಗೆ ಅಗತ್ಯವಿರುವ ಆಧುನಿಕ ಯಂತ್ರೋಪಕರಣಗಳು, ಲಿಫ್ಟ್‌ಗಳು, ಡಯಾಗ್ನೋಸ್ಟಿಕ್ ಉಪಕರಣಗಳು ಹಾಗೂ ಬಿಡಿಭಾಗಗಳ ಕುರಿತು ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>ವರ್ಕ್ ಶಾಪ್ ಸುಧಾರಣೆ ಮತ್ತು ನಿರ್ವಹಣಾ ಸೌಲಭ್ಯಗಳಿಗಾಗಿ ನಿಗಮದಲ್ಲಿ PME ITEMS ಗಳ ಖರೀದಿಗೆ 2025-26ನೇ ಸಾಲಿನಲ್ಲಿ ರೂ.30.00 ಕೋಟಿ ಮೀಸಲಿಡಲಾಗಿದೆ.<br>2024-25ನೇ ಸಾಲಿನಲ್ಲಿ ಬೀದರ್ ವಿಭಾಗದ ವರ್ಕ್ ಶಾಪ್ ಸುಧಾರಣೆ ಮತ್ತು ಬಸ್‌ಗಳ ನಿರ್ವಹಣೆಗಾಗಿ ಒಟ್ಟು ರೂ.9.79 ಕೋಟಿಗಳಷ್ಟು ವೆಚ್ಚ ಮಾಡಲಾಗಿದೆ. |
| ಊ. | ಪರಿಸರ ಮಾಲಿನ್ಯ ತಡೆಗಟ್ಟಲು ಹಾಗೂ ಸಾರಿಗೆ ವೆಚ್ಚ ಕಡಿಮೆ ಮಾಡಲು ಬೀದರ್ | ಪರಿಸರ ಮಾಲಿನ್ಯ ತಡೆಗಟ್ಟಲು ಹಾಗೂ ಸಾರಿಗೆ ವೆಚ್ಚ ಕಡಿಮೆ ಮಾಡಲು ಬೀದರ್ ಜಿಲ್ಲೆಯಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು (Eletric Buses) ಪ್ರಾಯೋಗಿಕವಾಗಿ ಅಥವಾ ಹಂತ ಹಂತವಾಗಿ ಪರಿಚಯಿಸುವ ಕುರಿತು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಜಿಲ್ಲೆಯಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು (Eletric Buses) ಪ್ರಾಯೋಗಿಕವಾಗಿ ಅಥವಾ ಹಂತ ಹಂತವಾಗಿ ಪರಿಚಯಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ಬೀದರ್ ವಿಭಾಗಕ್ಕೆ ಎಷ್ಟು ಎಲೆಕ್ಟ್ರಿಕ್ ಬಸ್ ಗಳನ್ನು ಹಂಚಿಕೆ ಮಾಡಲು ನಿರ್ಧರಿಸಲಾಗಿದೆ; ಅವುಗಳನ್ನು ಚಾರ್ಜಿಂಗ್ ಮೂಲಸೌಕರ್ಯ ಸಹಿತ ಯಾವ ಅವಧಿಯಲ್ಲಿ ಜಾರಿಗೆ ತರಲಾಗುತ್ತದೆ? | 2026-27ನೇ ಸಾಲಿನ ಆಯವ್ಯಯ ಕಂಡಿಕೆ 481ರಲ್ಲಿ ವಿಶ್ವಬ್ಯಾಂಕ್ ನೆರವಿನೊಂದಿಗೆ KARNATAKA ELECTRIC BUS PROGRAM ಯೋಜನೆಯಡಿ 4000 ವಿದ್ಯುತ್ ಚಾಲಿತ ಬಸ್ಸುಗಳನ್ನು ಘೋಷಣೆ ಮಾಡಲಾಗಿದ್ದು, ಈ ಪೈಕಿ 1000 ಬಸ್ಸುಗಳನ್ನು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಕಾರ್ಯಾಚರಣೆ ಮಾಡಲು ಉದ್ದೇಶಿಸಿದ್ದು, ಸಂಪೂರ್ಣ ಅನುಸೂಚಿಗಳ ಪಟ್ಟಿ, ಘಟಕಗಳು ಹಾಗೂ ಮಧ್ಯಂತರ ಚಾರ್ಜಿಂಗ್ ಸ್ಥಳಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಇದರಲ್ಲಿ ಬೀದರ್ ವಿಭಾಗಕ್ಕೆ ವಿದ್ಯುತ್‌ಚಾಲಿತ ಬಸ್ಸುಗಳನ್ನು ಒದಗಿಸುವ ಬಗ್ಗೆ ಆದ್ಯತೆಯ ಮೇರೆಗೆ ಪರಿಶೀಲಿಸಲಾಗುವುದು. |

ಸಂಖ್ಯೆ: ಟಿಡಿ 149 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು